SATYAVADI- An Anglo Kannada Weekly. Published Every Saturday

Reg. No. M-1299

ಸತ್ಯವಾದಿ

ದಿಡಿ ಪತ್ರಿಕೆ ಓಪೈ

ವಾರ್ಷಿಕ ಜಂದಾ 1—0—0] ಪ್ರತಿ ಶನಿವಾರ ಪ್ರಕಟಿಸಲ್ಪಡುವುದು. [ಅಂಚೆ ವೆಚ್ಚ ಸಮೇತ 2—0—0

ಸಂಪುಟ 4.] ಮೈಸೂರು, ಶನಿವಾರ, 24ನೇ ಸೆಪ್ಟಂಬರ್ 1921. [ಸಂಚಿಕೆ 11

ಲೇಖಕರಿಗೆ ಸೂಚನೆ.

ಉಪಲೇಖಕರು ಪಡುವ ಅಭಿಪ್ರಾಯಕ್ಕೆ ನಾವು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸಕಲರೂ ತಿಳಿಯತಕ್ಕದ್ದು.

ಇತರ ಪತ್ರಿಕೆಗಳಿಗೆ ಕಳುಹಿಸಿದ ಲೇಖನಗಳು ನಮಗೆ ಕಳುಹಿಸಬೇಕಾದ್ದಿಲ್ಲ.

ಆಯಾ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದವಿಷಯಗಳು ಆಯಾ ಶನಿವಾರದ ಹಿಂದಿನ ಬುಧವಾರದೊಳಗೆ ನಮ್ಮ ಕರಗತವಾಗಬೇಕು.

ಉತ್ತಮವಾದ ಹಾಸ್ಯರಸದಿಂದೊಡಗೂಡಿದ ಪ್ರಜಾಕ್ಷೇಮಾಭಿವೃದ್ಧಿ ವಿಷಯವಾದ ಲೇಖನಗಳು ಆದರದಿಂದ ಸ್ವೀಕರಿಸಲ್ಪಡುವುವು.

ಮಾರುತೀ ಅಂಡ್ ಕೋ

ಟಿ. ಕೃಷ್ಣಶಾಸ್ತ್ರಿಗಳ ಆಯುರ್ವೇದೀಯ ಔಷಧಗಳು

1. ಮಾರುತೀ ಆಂಜನ 2. ರೆಂಡ್ ಆಯಿಂಟ್‌ಮೆಂಟ್ 3, ಭೃಂಗಾಮಲಕ ತೈಲ 4. ಬಿಲ್ವಾದಿ ರಸಾಯನ 5. ಅಶ್ವಗಂದೀ ರಸಾಯನ 6. ಗೋರೋಚನ ಕಸ್ತೂರಿ ಮಾತ್ರೆ ಮೇಲ್ಕಂಡ ಔಷಧಿಗಳು ,, ಮಾರುತೀ ಅಂಡ್ ಕೋ '' ಯವರಲ್ಲಿ ಸಿಕ್ಕುತ್ತವೆ ಕ್ಯಾಟಲಾಗಿಗೆ ಬರೆಯರಿ ಫ್ರೀಯಾಗಿ ಕಳುಹಿಸುತ್ತೇವೆ ಮತ್ತು ಜಾತಕದ ಫಲಗಳನ್ನು ಬರೆಯುತ್ತೇವೆ ಫೀಜು 10-0-0 ಒಂದು ತಿಂಗಳ ಜಾತಕವನ್ನು ಫ್ರೀಯಾಗಿ ಬರೆದು ಕೊಡುತ್ತೇವೆ ನಂ 1, 8. ಆ ನಂ 2, 8. ಆ ನಂ 3, 1-8-0. ರೂ ನಂ 4, 1-8-0 ರೂ ನಂ 5, 1-8-0 ರೂ ನಂ 6, 4. ಆ

ಮ್ಯಾನೇಜರ್ ಟಿ. ಕೆ. ಸುಬ್ಬಾಶಾಸ್ತ್ರಿ.

ಮಾರುತೀ ಅಂಡ್ ಕೋ ಮೈಸೂರು.

ಟಿಲಕ ಸಂದೇಶದ ಸಂಪಾದಕರೂ ದಕ್ಷಿಣ ಕಾನಡಾ ಜಿಲ್ಲೆಯ ಕಾಂಗ್ರೆಸ ಸೆಕ್ರೆಟರಿಗಳೂ ಆದ ಶ್ರೀ ಡಿ. ಕೆ. ಭಾರದ್ವಾಜರವರಿಗೆ ೨ ತಿಂಗಳವರಿಗೆ ಮಂಗಳೂರ ತಾಲ್ಲೂಕಿನಲ್ಲಿ ಭಾಷಣ ಮಾಡಬಾರದೆಂದು ಹುಕುಮು ಕೊಟ್ಟಿರುವರು.

GOOD SEEDS

As good as can be grown Sow the right kind of seed at the right season and save disappointment. We have just the right kind of seeds for Indian climate— both flower and vegetable.

Beautifully illustrated large descripeh tive catalogue free on application. (Please mention this paper when writing. Please correspond in English only)

PESTONJEE P. POCHA & SONS

Seed Merchants, POONA.

ಓದಿರಿ! ಓದಿರಿ!

ಶುಭೋದಯ

ರಾಜಕೀಯ, ಧಾರ್ಮಿಕ, ಸಾಮಾಜಿಕ ಮೊದಲಾದ ಮಹತ್ವವುಳ್ಳ ವಿಷಯಗಳನ್ನು ನಮ್ಮ ನಾಡಿನ ಭಾಷೆಯಲ್ಲಿ ಚರ್ಚಿಸಿ, ಜನತೆಯಲ್ಲಿ ಜಾಗ್ರತಿಯನ್ನುಂಟು ಮಾಡುವದೇ ಈ ಪತ್ರಿಕೆಯ ಮುಖ್ಯೋದ್ದೇಶವು. ಕನ್ನಡ ಭಾಷೆಗೆ ಚಿತ್ತಾಕರ್ಷಕ ಸ್ವರೂಪವನ್ನು ಕೊಟ್ಟು ದೇಶೋನ್ನತಿಯ ವಿಷಯಗಳ ಕಡೆಗೆ ವಾಚಕರ ಲಕ್ಷವನ್ನು ಎಳೆಯುವದಕ್ಕೆ ಯತ್ನಿಸುತ್ತಿರುವದು. ಉಪಯುಕ್ತವಾದ ಎಲ್ಲ ತರದ ಸುದ್ದಿಗಳೂ ಬರುವವು. ಕರ್ನಾಟಕದ ಕಲ್ಯಾಣ ಕಾಂಕ್ಷಿಗಳು ಅವಶ್ಯವಾಗಿ ಓದಲೇಬೇಕು. ವಾರ್ಷಿಕಜಂದಾ ಅಂಚೆ ವೆಚ್ಚಸೇರಿ ೩-೧೩-೦

ವಿಳಾಸ:— ಸಂಪಾದಕ, ಶುಭೋದಯ, ಧಾರವಾಡ

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದವರು ನಮ್ಮ ಸಂಸ್ಥಾನದ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರೈಯನವರ 60ನೇ ವರ್ಷದ ವರ್ದಂತಿ ಮಹೋತ್ಸವವನ್ನು ದೊಡ್ಡಣ್ಣನವರ ಹಾಲಿನಲ್ಲಿ ದಿವಾಕ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ನಡಿಸಿದರೆಂದೂ, ವ || ವೆಂಕಟಕೃಷ್ಣಯ್ಯನವರು ಮ|| ಡಿ. ವಿ. ಗುಂಡಪ್ಪ, ಕೆ. ಹೆಚ್, ರಾಮಯ್ಯನವರೂ ವಿಶ್ವೇಶ್ವರೈಯ್ಯನವರ ಗುಣಕಥನಮಾಡಿದರೆಂದೂ ತಿಳಿಯಬಂದಿದೆ.

ಮೈಸೂರುದೇಶದಲ್ಲಿ ಹೊಸ ಸೃಷ್ಟಿ

ಅತ್ಯುತ್ತಮವಾದ ಲೆದರ್ ಬ್ಯಾಗ್‌ಗಳು ಕಾರ್ಪೆಟ್ ಬ್ಯಾಗ್‌ಗಳು ಸೂಟ್ ಕೇಸುಗಳು ನಮ್ಮಲ್ಲಿ ತಯಾರಾಗುತ್ತವೆ ನಿಮಗೆ ಬೇಕಾದ ಅಳತೆ ಮತ್ತು ನಮೂನೆಯಲ್ಲಿ ತೃಪ್ತಿಕರವಾಗಿ ತಯಾರ್ಮಾಡಿ ಕೊಡುತ್ತೇವೆ. ಕ್ರಯ ಬಹುಸುಲಭ ಅತ್ಯುತ್ತಮಕೆಲಸ. ಅಲ್ಲದೆ ನಮ್ಮಲ್ಲಿ ಫೋಟೋ ಲಾರ್ಜ್‌ಮೆಂಟ್ ಪೆಯಿಂಟರ್ ಕೆಲಸಗಳು ಉತ್ತಮತರಹ ಸೈನ್ ಬೋರ್ಡುಗಳು ತಯಾರಾಗುತ್ತದೆ.

ಎ. ಆರ್. ಸುಬ್ಬರಾವ್

ಆರ್ಟಿಸ್ಟ್ ಅಂಡ್ ಮೆಡಲಿಸ್ಟ್ ಕಲಾಮಂದಿರ

ಬೆಂಗಳೂರು

How to Learn Hindi

By

Pandit Satyavrata Sidhantalankar

Highly spoken of

By Dr. Subrahmani Iyer

C. Jinrajdas C. R. Reddy and Swami Sharadhananda and Send Rs 1 at once to save disappointment. Postage extra.

Secretary ARYASAMAJ

Basavangudi BANGALORE

ಒಕ್ಕಲಿಗ ವಿದ್ಯಾರ್ಥಿಗಳಿಗೆ ,, ಕಾರ್ಯತಃ '' ಸಹಾಯ ಮೂಲಪ್ರಯುಕ್ತ ದಸರಾಕಾಲದಲ್ಲಿ (1921ನೇ ಅಕ್ಟೋಬರ್ ತಿಂಗಳಲ್ಲಿ) ಒಂದು ಒಕ್ಕಲಿಗ ವಿದ್ಯಾಸಹಾಯಸಭೆಯೊಂದನ್ನು ನಡೆಸಬೇಕೆಂದೂ, ಸರಿಯಾದ ಕಾರ್ಯಕ್ರಮಗಳು ಮುಂದೆ ತಿಳಿಸಲ್ಪಡುವುದೆಂದೂ, ಈ ಸಭೆಗೆ ನಮ್ಮ ದಿವಾಕ ಸಾಹೇಬರನ್ನು ಅಧ್ಯಕ್ಷರನ್ನಾಗಿ ಮಾಡುವ ಏರ್ಪಾಡು ನಡೆಯುತ್ತಿರುವದೆಂದೂ, ಮೈಸೂರು ಬೆಂಕಿನವಾಬರ ಬೀದಿಯಲ್ಲಿರುವ ಒಕ್ಕಲಿಗರ ವಿದ್ಯಾರ್ಥಿಯಾದ ಮ|| ಹೆಚ್. ವೀರಣ್ಣಗೌಡರು ತಿಳಿಸುತ್ತಾರೆ.

" ಸ ತ್ಯ ವಾ ದಿ "

ಮೈಸೂರು ಶನಿವಾರ 24 ನೇ ಸೆಪ್ಟಂಬರ್ 1921

ಹೊಸ ವಿಧಾನ.

ಭಾರತೀಯರು ಸ್ವರಾಜ್ಯಕ್ಕಾಗಿ ಸುಮಾರು ಮೂವತ್ತಾರು ವರುಷಗಳಿಂದ ಹೊಡೆದಾಡುತ್ತಿರುವರು. ಇಂಡಿಯಾ ಸರಕಾರದವರಾದರೋ ತಮ್ಮ ಪ್ರಜೆಗಳಿಗೆ ಬೇಕಾದುದನ್ನು ಕೊಡದೆ ಕಾಲಾತೀತ ಮಾಡುತ್ತಿದ್ದರು. ಈಚೆಗೆ ಪಂಜಾಬ್ ಗಲಾಟೆಯಲ್ಲಿಯೂ, ಖಿಲಾಪತ್ ವಿಚಾರದಲ್ಲಿಯೂ, ಭಾರತೀಯರಿಗೆ ನ್ಯಾಯವು ದೊರೆಯಲಿಲ್ಲವೆಂದು ಭಾರತೀಯರು ' ಶಾಂತತೆಯನ್ನು ' ತಾಳಿ ಅಸಹಕಾರವೆಂಬ ಮಂತ್ರದ ಆಚರಣೆಯಿಂದ ಸ್ವರಾಜ್ಯವನ್ನು ಹೊಂದಬೇಕೆಂದು ನಿರ್ಧರಿಸಿದರು. ಮೊದಲು ಸರಕಾರದವರು ಅಸಹಕಾರ ಪಂಗಡದವರನ್ನು ಅಲಕ್ಷ್ಯದಿಂದ ಕಂಡರು. ಆದರೆ ಎಲ್ಲಾ ಭಾರತೀಯರೂ ಒಂದೇ ಮನಸ್ಸಿನಿಂದ ಕೆಲಸಮಾಡುವರಾದ್ದರಿಂದ ಸರಕಾರದವರಿಗೆ ಇವರ ಚಳವಳಿಯನ್ನು ನಿಲ್ಲಿಸಬೇಕೆಂದು ಬುದ್ಧಿ ಹುಟ್ಟಿತು. ಇದಕ್ಕಾಗಿ ಇವರು ಕಂಡುಹಿಡಿದ ಮಾರ್ಗವಾವುದು? ಪ್ರಜಾಮುಖಂಡರನ್ನು ಹಿಡಿದು ಜೈಲಿಗೆ ಹಾಕಿ ಶಿಕ್ಷಿಸುವುದು. ಇದರಿಂದ ನಾಯಕನಿಲ್ಲದ ಸೈನಿಕರು ಚದರಿ ಹೋಗುವಂತೆ ಭಾರತೀಯರೆಲ್ಲರೂ ಸ್ವರಾಜ್ಯದ ಅಭಿಪ್ರಾಯವನ್ನು ಮರೆತುಬಿಡುವರೆಂದು ತಿಳಿದು ಸರಕಾರದವರು ಹೀಗೆ ಮಾಡುವರೋ ಏನೋ? ಮೊನ್ನೆಯ ದಿವಸ ಅಂದರೆ, ಹದಿನೈದನೆಯ ತಾರೀಖಿನ ದಿವಸ ಮೌಲಾನಾ ಮಹಮ್ಮದಾಲಿಯವರು ಹಿಡಿದೊಯ್ಯಲ್ಪಟ್ಟರು. ಅನಂತರದಲ್ಲಿ ಮೌ|| ಷೌಕಟ್ಆಲಿಯವರು ಹಿಡಿಯಲ್ಪಟ್ಟ ವರ್ತಮಾನವು ಬಂದಿರುವುದು. ಈಚೆಗೆ ಡಾ|| ಕಿಚ್ಲೂರವರೂ ಇನ್ನೂ ಅನೇಕ ಮಹಮ್ಮದೀಯ ಮುಖಂಡರೂ ಹಿಡಿಯಲ್ಪಟ್ಟರೆಂಬ ವರ್ತಮಾನ ಬಂದಿರುವುದು. ಈಗ ಕೆಲವು ದಿವಸಗಳಿಂದ ಮಹಾತ್ಮಾ ಗಾಂಧಿಯವರು ಹಿಡಿಯಲ್ಪಡುವರೆಂಬ ವರ್ತಮಾನವು ಹುಟ್ಟಿರುವುದು. ಹೀಗೆ ಮುಖಂಡರು ಹಿಡಿಯಲ್ಪಟ್ಟರೆ ಜನರಿಗೆ ಸರಕಾರದಲ್ಲಿರುವ ನಂಬಿಕೆಯೂ ಕಡಮೆಯಾಗಿ ಪ್ರಜೆಗಳಿಗೂ ಸರಕಾರದವರಿಗೂ ಪರಸ್ಪರ ಅಪನಂಬಿಕೆ ಹೆಚ್ಚಿ ಬಹಳ ಅನರ್ಥಕ್ಕೆ ಕಾರಣವಾಗಬಹುದು ಜನರಿಗೆ ತಮ್ಮ ಮುಖಂಡರಲ್ಲಿ ಬಹಳ ಪ್ರೀತಿಯಿರುವುದರಿಂದ ಅವರ ಪರವಾಗಿ ಪ್ರಾಣವನ್ನಾದರೂ ಒಪ್ಪಿಸುವುದಕ್ಕೆ ಸಿದ್ಧರಾಗಿರುವರು. ಮಹಾತ್ಮಾ ಗಾಂಧಿಯವರೂ ಅಲಿಸಹೋದರರೂ ಜನರನ್ನು ಹತೋಟಿಯಲ್ಲಿಡಬಲ್ಲರು. ಹೀಗಿರುವಲ್ಲಿ ಅವರನ್ನೇ ಹಿಡಿದು ಅನ್ಯಾಯವಾಗಿ ಶಿಕ್ಷೆಗೆ ಗುರಿಮಾಡುವುದು ಅಸಾಧವೆಂದು ಕಾಣುತ್ತದೆ. ಆದುದರಿಂದ ತಡಮಾಡದೆ ಆಲೀ ಸಹೋದರರನ್ನೂ ಇತರ ಮುಖಂಡರನ್ನೂ ಕೂಡಲೆ ಜೈಲಿನಿಂದ ಬಿಡುಗಡೆ ಮಾಡುವುದುತ್ತಮವೆಂದು ತೋರುತ್ತದೆ. ಇದಕ್ಕೆ ಸರಕಾರದವರ ಗಮನಕೊಡಲ್ಪಟ್ಟರೆ ದೇಶದಲ್ಲಿ ಶಾಂತಿನೆಲೆಗೊಳ್ಳುವುದರಲ್ಲಿ ಸಂಶಯವಿಲ್ಲ.

" ನವರಾತ್ರಿ "

— — —

ನವರಾತ್ರಿಹಬ್ಬವು ಬರುತ್ತಿತೆಬೇಗದಿ ಜಗ್ಗುತಕೂಗುತಸಾರುತಲಿ || ಭಾವಾಮೈದುನಈಬಳಗ ಅಬಳಗವೆಲ್ಲಾರು ಬರುವಾರುಈಕಾಲದಿ ||೧||

ನಾಗಮಂಗಲದಿಂದ ನಾಗಶಾಸ್ತ್ರಿಗಳು ಬಾಗೇಪಲ್ಲಿಯಿಂದ ರಾಮಾಶಾಸ್ತ್ರಿಬೇಗನೆಬರುವರು || ಬೇಲೂರುದಾಸಂಭಟ್ರು ಅಜ್ಜಮ್ಮ ಸುಬ್ಬಮ್ಮ ಸೀತೆಕೂಡಿ ||೨||

ನಾಗಾಭೂಷಣರಾಯರು ಅಜ್ಯುತರಾಯರು ಮಂಗೇಶರಾಯರುಸಂಸಾರದಿ || ಸಾಗರದಿಂದಲಿ ಸೊರಬದಕಡೆಯಿಂದ ರಂಗನಾಥಾವಜರುವರಂತೆ ||೩||

ಸುಂದರಸ್ಟೈಯ್ಯರ್ ಸುಬ್ರಹ್ಮಣ್ಯಂ ಶೇಲಂ ತಿರುಪತ್ತೂರುವೆಂಗಟಶಾಮಯ್ಯರ್ || ಮಧುರೆನಟೇಶಯ್ಯರಂ ನೀಲಾಂಬಸ್ವರ್ನಾಂಬಶೇಷಮ್ಮ ಸಹಿತಲೆಬರುವರಂತೆ ||

ಮಂಜೇಲಿಯಿಂದಲಿ ಮಾಧವಆಚಾರ್ರು ಸೀತಾಭಾಯಿರಂಗಭಾಯಿಸಹ || ಕಂಚಿಕೃಷ್ಣಾಚಾರು ಹನುಂತಾಚಾರ್ರು ಅಬ್ಬುದುಬ್ಬು ದಚ್ಚಿಕಿಟ್ಟಿಸಹ ||೫||

ತಿರುಜನಾಪಳ್ಳಿಯಿಂದ ತಿರುನಾರಣಯ್ಯಂಗಾರ್ರು ರಾಮಾನುಜಂ ರಂಗನಾಯ್ಕ್ ಯೊಡರ್ಕ್ || ಶ್ರೀರಂಗನಾರಣಯ್ಯಂಗಾರ್ರುಕ್ಮಿಣಿಯೊಡರ್ಕ ವರುವಾರು ಮೈಸೂರು ನರ್ಮತೀರಲ ||೬||

ಚಿಕ್ಕಬ್ಬಿದ್ದಿ ದೊಡ್ಡಬ್ಬಿದ್ದಿ ನುರುಬುದ್ದಿ ಅಪ್ಪಾಜಿ ಬಸ್ವರಾಜೆ ಅರ್ಸರ್ ಬರುವರಂತೆ || ಅಜ್ಜೀಯಪುರದಿಂದ ಚಾಮೇಅರಸು ಬರುವರ್ ಭಾಷಪ್ಪನದೊಡ್ಡಿಯ ಬಾಳೆಅರ್ಸು ||೭||

ಮೇಮೂಷೋತಾಮು ಮಿಾರೂಯೆಲಾ ರಾಜಾವಗಾರ ಬಂಗಾರ್ನು ಪಿಲ್ಲುಕೋಡಿ || ರಾವ ಶೆಟ್ಟಿವಸ್ನಾಡು ಸೇಲ ಮುನುಂಚೀನು ಬೇಲೂ-ಬ್ಬುಶೆಟ್ಟಿವಸ್ತಾಡಂಟ ||೮||

ಎಂಗೆಲ ಭಾವಂಗಾರು ಮನಮುಂಗಮ್ಮನು ಕೊಡ್ತೆ ನಿಕಳ್ಳೆ ಗಾಲಮುಂನುಂ ಜೇವಸ್ತಾಡಂಟ || ಬೆಂಗಳೂರು ದಂಡ ಪ್ಯಾಟರಾವಕ್ಕ ಅಜ್ಜಮ್ಮ ಅದಿಬಿಡ್ಡಲು ತೀಡವಸ್ತಾಡಂಟ ||೯||

ಗುಬ್ಬಿಯಿಂದಲಿ ಭೊಗಿಗೌಡರು ಭೂಧಾಳು ಸಂಗಪಮಲ್ಲಪ್ಪ ರಾಜೇಗೌಡ || ಸುಬ್ಬೇಗೌಡ ಅರಕಲ್‌ಗೂಡಿಂದ ಕೆಂಪಣ್ಣ ಜೋಡಮ್ಮ ಬೆಟ್ಟಪ್ಪ ಬರುವರಂತೆ ೧೦||

[ಸಶೇಷ

(BY A CORRESPONDENT)

Q. What is your name?

A. My name is P. Acharya.

Q. Which is your native place?

A. Mysore is my native place but I live in Melukota

Q. Do you know Yatherajmutt?

A. I am a deciple of that mutt.

Q. Who is now at the head of the mutt

A- An intelligent Swamiji is now preciding at the head.

Q. Does he belong to old type

A. Although he belongs to old type he is a pure Swamiji of modern type

Q. Does he intends in doing any public good?

A He is always engaged in doing public good. He has nothing to do for himself.

Q Can you give me one or two examples of his public works?

A The learned Swamiji has given freedom to all his female desciples to attend lectures and he specially holds lectures to them. By this means, he has begun to educate the females. No other Swami has taken such of the important step. The Swamiji is of opinion that the females are the foundation to the constructive of a family of happiness, that therefore they are to be trained not by means of books but by means of lectures. He is instructing them very beautifully andif he continues method wtihout changing the policy. His female desciples will have to be the best match to their husbands, good mothers to their children, worthy women to the world and happy women to their neighbours.

Q. Is he for re-marriable of girls, poor widowed girls?

A. I cannot say anything of him in that attempt since I have not studied him deeply and associated freely.

Q. If he does it among his female deciples, the whole world will copy it out and he will be a Swami of the public good. The females wants leader of his type to set an example —

A. Draw his attention to that side by publicking same

ಅಲಿ ಸಹೋದರರಿಗೆ ಅವರ ತಾಯಿಯವರು ಕಳುಹಿಸಿರುವ ವರ್ತಮಾನ

——◈——

ಅಲಿ ಸಹೋದರರನ್ನು ದಸ್ತಗಿರಿ ಮಾಡಿದ [illegible]ರ್ತಮಾನವು ಅವರ ತಾಯಿಯವರಿಗೆ ತಿಳಿಯಲು ಅವರು ಮಹಾತ್ಮಗಾಂಧಿಯವರಿಗೂ ಮತ್ತು ತಮ್ಮ ಮಕ್ಕಳಿಗೆ ಈ ವರ್ತಮಾನವನ್ನು ಕಳುಹಿಸಿರುವರು.

ಗಾಂಧಿಯವರಿಗೆ:—" ನೀವು ಕಳುಹಿಸಿದ ತಂತೀವರ್ತಮಾನವು ಬಂದಿತು. ನಾನು ಧೈರ್ಯವುಳ್ಳವಳಾಗಿದ್ದೇನೆ ನೀವುಗಳು ಈಗ ಕೈಹಿಡಿದಿರುವ ಕೆಲಸಕ್ಕೆ ಯಾವ ವಿಧದಿಂದಲೂ ಚ್ಯುತಿ ಬರದಂತೆ ನೋಡಿಕೊಳ್ಳುವುದಲ್ಲದೆ, ಇನ್ನೂ ಹೆಚ್ಚಾದ ಆಶಕ್ತಿಯಿಂದ ಕೆಲಸ ಮಾಡಬೇಕು. ನಾನು ಕೇವಲ ಅಶಕ್ತಳಾಗಿದ್ದಾಗ್ಯೂ ನನ್ನ ಪ್ರಾಣವಿರುವವರಿಗೂ ಕೆಲಸ ಮಾಡುವುದಕ್ಕೆ ಸಿದ್ಧಳಾಗಿದ್ದೇನೆ. ದೇವರು ನಮಗೆ ಸಹಾಯಕನಾಗಿರುವನು."

ಅಲೀ ಸಹೋದರರಿಗೆ:—ಧೈರ್ಯವಾಗಿರಿ. ನೀವುಗಳು ಏಕಾಕಿಗಳಾಗಿಲ್ಲ. ದೇವರು ನಿಮ್ಮ ಜೊತೆಯಲ್ಲೇ ಇರುವನು. ಮುಸಲ್ಮಾನನಾದವನು ಎಂದಿಗೂ ನಿರಾಶೆಯುಳ್ಳವನಾಗಿರಬಾರದು, ನೀವು ನಿರಾಶೆಯುಳ್ಳವನಾಗಿರಬಾರದು. ನೀವು ಕೈಗೊಂಡಿರುವ ಕೆಲಸವನ್ನು ಎಂದಿಗೂ ಬಿಡಬೇಡಿ. ಪ್ರಿಯ ಮಕ್ಕಳಿರಾ ನಿಮ್ಮ ಧೈರ್ಯವನ್ನು ಬಿಡದೆ ನೀವು ಕೈಹಿಡಿದಿರತಕ್ಕ ಕಾರ್ಯಕ್ಕೋಸ್ಕರ ಎಷ್ಟೇ ಕಷ್ಟಗಳು ಬಂದಾಗ್ಯೂ ಸಹಿಸಿರಿ."

ಪತ್ರಸಂವಾದ.

———

ಸ್ತ್ರೀಯರ ಅಭ್ಯುದಯ

———

ಇದುವರಿಗೂ ಸ್ತ್ರೀಯರ ಅಭ್ಯುದಯವು ಪುರುಷರ ಅಧೀನವಾಗಿತ್ತು. ಈ ಅವಸ್ಥೆಯು ಯುಕ್ತವಲ್ಲವೆಂದೂ ಅವರ ಅಭ್ಯುದಯವನ್ನು ಅವರೇ ನೋಡಿಕೊಳ್ಳುವಹಾಗಾದರೂ ಉತ್ತಮಮಾರ್ಗದಲ್ಲಿ ಹೋದರೆ ಸಂತೋಷವೆ. ಮಾರ್ಗಾಂತರವರ್ತಿಗಳಾದರೆ ಬಹಳ ಕಷ್ಟ ಸ್ತ್ರೀಯರು ಚಪಲಚಿತ್ತರು ದೃಢಚಿತ್ತರು ಅಪೂರ್ವ. ಅವರಿಗೆ ಭೋಗ್ಯವಸ್ತುಗಳಮೇಲೆ ಬಹಳ ಪ್ರೀತಿಯು ತಮ್ಮ ದೇಹವನ್ನು ಅನ್ಯರಧೀಮಾಡದೆ ಏನು ಭೋಗ್ಯವಸ್ತುವನ್ನನುಭವಿಸಿದರೂ ಅಪವಾದಿಗಳಾಗುವದಿಲ್ಲ.

ಸ್ತ್ರೀಣಾಂದ್ವಿಗುಣಮಾಹಾರಂ ಬುದ್ಧಿಶ್ಚಾಪಿ
ಚತುರ್ಗುಣಾಃ | ಸಾಹಸಂ ಷಡ್ಗುಣಂಚೈವ
ಕಾಮಶ್ಚಾದಷ್ಟಗುಣಾಂ ಭವೇತ್ ||

ಎಂಬ ರೀತ್ಯ ಎಲ್ಲಾದರಲ್ಲಿಯೂ ಪುರುಷರಿಗೆ ಮೀರಿದವರಾಗಿಯೇ ಇದ್ದಾರೆ ಕಾಮ ಅಂದರೆ ಅಪೇಕ್ಷೆಯು ಕಾಮ ಅಂದರೆ ಮನ್ಮಥಜೇಷ್ಟೆ ಎಂತಲೂ ಎರಡರ್ಥವಾಗುತ್ತದೆ. ಅವರು ಯಾವದರಲ್ಲಿಯೂ ಪುರುಷರಿಗಿಂತಲೂ ಮೀರಿದವರಾಗಿದ್ದಾರೆ. ಸ್ತ್ರೀಯರಿಗೆ ತಾತ್ಕಾಲಿಕ ಆಲೋಚನೆಯೇ ಅಧಿಕವಲ್ಲದೆ ದೂರದೃಷ್ಟಿ ಆಲೋಚನೆಯು ಬಹಳ ಕಡಮೆ. ಸ್ತ್ರೀಯರಿಗೆ ಅಬಲೆಯರೆಂದು ಹೆಸರು ಶಾರೀರಿಕ ಬಲಹೀನತೆಯಿಂದರ್ಥವಲ್ಲದೆ ಫಲಪರ್ಯವಸಾನ ದೀಘ್ರಾಲೋಚನೆ ಯಿವರಲ್ಲಿಲ್ಲವಾದಕಾರಣ ಅಬಲೆಯರೆಂದು ಹೆಸರು ಹೊಂದಿದ್ದಾರೆ.

ಪುರುಷರನ್ನು ಬಿಟ್ಟರೆ ಸ್ತ್ರೀಯರಿಗೆ ಲೋಕಸುಖವಿಲ್ಲಾ ಸ್ತ್ರೀಯನ್ನು ತೊರೆದರೆ ಪುರುಷರಿಗೂ ಹಾಗೆಯೇ ಸರಿ. ಆದ್ದರಿಂದ ಪ್ರಾಚೀನರು ಒಬ್ಬ ಹೆಂಗಸಿಗೆ ಒಬ್ಬ ಗಂಡನೆಂದು ಗೊತ್ತುಮಾಡಿ, ಆ ಸಂಸಾರಕ್ಕೆ ಇಬ್ಬರೂ ಸಮಭಾಗಿಗಳಾಗಿ ಸಮಸಂತೋಷವನ್ನನುಭವಿಸುವಂತೆ ಮಾಡಿದರು ಇದರಲ್ಲಿ ಸ್ತ್ರೀಯರು ನೊಂದುಹೋದರೆ ಪುರುಷರು ಮತ್ತೊಬ್ಬಳನ್ನು ಪರಿಗ್ರಹಿಸುವದೇನು? ಪುರುಷರು ನೊಂದುಹೋದರೆ ಸ್ತ್ರೀಯರು ಮತ್ತೊಬ್ಬರನ್ನು ಪರಿಗ್ರಹಿಸಕೂಡದೆಂಬ ನಿರ್ಬಂಧನೇನು? ಪ್ರಾಚೀನರು ಈ ನಿರ್ಬಂಧವನ್ನೇರ್ಪಡಿಸುವದಕ್ಕೆ ಸರಿಯಾದ ಕಾರಣವಿತ್ತು ಅಕಾರಣವು ಈಗ ಬದಲಾಯಿತಿಹೋಯಿತು. ಆದ್ದರಿಂದ ಆಧುನಿಕರು ಪ್ರಾಚೀನರ ನಿರ್ಬಂಧಕ್ಕೆ ಸ್ವಲ್ಪ ಬದಲಾವಣೆಯನ್ನು ಏರ್ಪಡಿಸಿಕೊಳ್ಳಲೇಬೇಕು. ಪ್ರಾಚೀನರು ಏರ್ಪಡಿಸಿರುವ ವಿವಾಹ ಮಂತ್ರಾರ್ಥವನ್ನು ನೋಡಿದರೆ ಪ್ರೌಢವಿವಾಹವೇ ಇದ್ದಹಾಗೆ ನಿರ್ಧರವಾಗುತ್ತೆ ಈಚಿಗೆ ಆದರಿಂದ ಉಂಟಾದ ಅನಾನುಕೂಲವನ್ನು ಪರ್ಯಾಲೋಚಿಸಿ ಬಾಲ್ಯವಿವಾಹ ವಿಚಾರಿಗೆ ತಿರುಗಿಸಿಕೊಂಡರು, ಮಂತ್ರದಲ್ಲೇನು ಬದಲಾಯಿಸಲಿಲ್ಲ ಬಾಲ್ಯ ವಿವಾಹದಿಂದ ವಿತಂತುಗಳ ಸಂಖ್ಯೆಯೂ ಹೆಚ್ಚಾಗುತಬಂತು ಪ್ರಾಚೀನರು ಪ್ರೌಢವಿವಾಹದ ತೊಂದರೆಯನ್ನು ನೋಡಿ ಬಾಲ್ಯವಿವಾಹದ ವಿಚಾರಿಗೆ ಪ್ರಯತ್ನವಂಮಾಡಿದಾರೆಯೂದ [illegible] ಅನೇಕ ಪಂಡಿತರೂ ಲೋಕಜ್ಞಾನಿಗಳೂ ಬಾಲವಿತಂತುಗಳ ಶೋಕನಿವಾರಣೋಪಾಯವನ್ನು ಚಿಂತಿಸುವರಾಗುವದಿಲ್ಲ. ಸ್ತ್ರೀಯರು ತಾವೇ ಈ ವಿಚಾರದಲ್ಲಿ ಏನುಮಾಡಬೇಕು ಎಂದು ಪರ್ಯಾಲೋಚಿಸಿಕೊಳ್ಳುವ ಕಾಲವು ಸಮೀಪಿಸಿರುತ್ತದೆ.

ಆಧುನಿಕ ಸ್ತ್ರೀಯರು ಪ್ರಾಚೀನಾಚಾರಾನುವಾದದಲ್ಲಿ ಅನೇಕ ಬದಲಾವಣೆಗಳನ್ನು ತಂದುಕೊಂಡು ಬಹುದೂರ ಪ್ರಯಾಣಮಾಡಿದ್ದಾರೆ ಅದನ್ನು ಪುರುಷರೂ ಆಕ್ಷೇಪಿಸುವದಕ್ಕೆ ಶಕ್ತಿಸಾಲದೆ ಒಪ್ಪಿಕೊಳ್ಳುತಲಿದ್ದಾರೆ ಇದನ್ನು ನೋಡಿದರೆ ಪುರುಷರು ಸ್ತ್ರೀಯರ ವ್ಯಾಮೋಹಕ್ಕೆ ಶಿಲಿಕಿ ಅವರು ಹೋದಂತೆ ಬಿಡುವಸ್ಥಿತಿಗೆ ಬಂದಿರುವಹಾಗೆ ಕಾಣುತ್ತದೆ. ಗೋಪ್ಯದಲ್ಲಿ ದೇಹವಿಕ್ರಯಮಾಡುವ ಸ್ತ್ರೀಯರು ಹೆಚ್ಚಿರುವರು ಅದೂ ಕೂಡ ಕ್ರಿಮಿನಲ್ ಪ್ರೊಸೀಜರ್ ಕೋಡಿನ 500ನೇ ಸೆಕ್ಷನ್ ಹೆದರಿಕೆಯಿಂದ ಯಾರೂ ಬಾಯಲ್ಲಿ ಆಡಲು ಶಕ್ತಿ ಇಲ್ಲದೆ ಗುಸುಗುಟ್ಟಿಕೊಂಡು ಹೋಗುತ್ತಾರೆ ಬಾಹ್ಯದ್ರೋಹ ವಿಕ್ರಯಿಗಳು ಕೆಲವರು ತಲೆಯತ್ತಿದರು. ಅವರಿಗೂ ಈ ಕೋಡಿನ ಸೆಕ್ಷನ್ ಸಹಾಯಮಾಡುವಹಾಗೆ ತೋರುತ್ತೆ. ಆದ್ದರಿಂದ "ಭಯಾತ್ಪ್ರತಿಷ್ಠತಿಕೋರ್ಯಃ" ಎಂಬಂತೆ ಕೋಡಿನ ಭಯದಿಂದ ಎಲ್ಲರೂ ಹೆದರಿ ನಡಿಯುತ್ತಿದ್ದಾರೆ ಆದ್ದರಿಂದ ಆಧುನಿಕ ಕಾಲದಲ್ಲಿ ಸರ್ಕಾರದ ಭಯವೇ ಮುಖ್ಯವಲ್ಲದೆ ಶಾಸ್ತ್ರಭಯ, ಪದ್ಧತಿಯಭಯ, ಗುರುಹಿರಿಯರಭಯವೆಲ್ಲಾ ಪಲಾಯನವಾಯಿತು.

ಏತಂತು ಸ್ತ್ರೀಯರು, ವಯಸ್ಸಿನಲ್ಲಿ ದೇಹವಿಕ್ರಯವಾಡಿಕೊಂಡು ಜೀವಿಸುತ್ತಾ, ಗರ್ಭಾಶಯವನ್ನು ಹೊಂದಿದ ಪಿಂಡವನ್ನು ನಿಗ್ರಹಮಾಡುವ ಪ್ರಯತ್ನದಲ್ಲಿ ರೋಗಿಗಳಾಗುತ್ತಾ ತೇಜಸ್ಸಿನಲ್ಲಿ ಬದಲಾಯಿತಿಕೊಂಡು ವೃದ್ಧಾಪ್ಯದಲ್ಲಿ ರಕ್ಷಿಸರಿಲ್ಲದೆ ಅಲೆಯುವುದು ಯುಕ್ತವೆಂದು ಹೆಂಗಸರಿಗೇನೇ ತೋರಿದರೆ, ಏನಾದರೊಂದು ಕ್ರಮಕ್ಕೆ ಬರುವುದಲ್ಲದೆ ಗಂಡಸರು ಈ ವಿಷಯದಲ್ಲಿ ವಿತಂತುಗಳ ಸಹಾಯವಿಲ್ಲದೆ ಪ್ರಯತ್ನಿಸುವುದು ಕಾರ್ಯ ಸಾಧಕವಾಗುವುದಿಲ್ಲ.

ವಿತಂತುವಾದರೂ ಅಕೆಯನ್ನು ನಿರ್ಬಂಧದಿಂದ ಪುರುಷರು ಅನುಭವಿಸುವುದಕ್ಕೆ ಇಲ್ಲ. ಕೋಡಿನಸೆಕ್ಷನ್ ಬಾಧಿಸುತ್ತದೆ. ಆದ್ದರಿಂದ ವಿವಾಹಿತರಾಗಿ ಅಮರಣಾಂತ್ಯದವರಿಗೂ ಸುಖದಿಂದ ಕಾಲಹರಣ ಮಾಡಬೇಕೆಂಬ ವಿತಂತುಗಳು ಅವರಭಿಪ್ರಾಯವನ್ನು ವ್ಯಕ್ತಪಡಿಸಿದರೆ ಅವರನ್ನು ಕೈಹಿಡಿದು ಅವರನ್ನೇ ರಕ್ಷಿಸಿ ತಾವು ಅವರಿಂದ ಸುಖಹೊಂದುವ ಪುರುಷರು ಮುಂದೆರಿಯು

ವರು. ವಿವಾಹ ಮಂತ್ರವನ್ನು ಅಷ್ಟಾಕ್ಷರಿ ಮಠದ ವರು ಮೊದಲೇ ಮುದ್ರಿಸಿ ಪೌರೋಹಿತ್ಯಕ್ಕು ಅಂಥವರೊಡನೆ ಸತ್ಯವ್ಯವಹಾರಕ್ಕೂ ಸಿದ್ಧರಾಗಿ ನಿಂತಿದಾರೆ.

ನ್ಯಾಷನಲ್ ಸ್ಕೂಲಗಳೂ ಮತ್ತು ಬ್ರಾಹ್ಮಣ ವಿದ್ಯಾಸಹಾಯಸಂಘವೂ

—: No 1 :—

ಪಂಚಮರನ್ನು ಸರ್ಕಾರಿ ಎ. ವಿ. ಸ್ಕೂಲುಗಳಿಗೆ ಸೇರಿಸಬೇಕೆಂದು, ಇನ್‌ಸ್ಪೆಕ್ಟರ್ ಜನರಲ್‌ರವರಾಗಿದ್ದ ಮ|| ರೆಡ್ಡಿಯವರು ಒಂದು ಮೆಮೋರಾಂಡಮ್ಮನ್ನು ಕಳುಹಿಸಲು, ಶೃಂಗೇರಿ ಜಾಮರಾಜನಗರವೇ ಮೊದಲಾದ ಕೆಲವು ಸ್ಥಳಗಳಲ್ಲಿ ಬ್ರಾಹ್ಮಣರುಗಳೂ ಮತ್ತು ಬ್ರಾಹ್ಮಣೇತರರುಗಳೂ ತಮ್ಮ ಮಕ್ಕಳನ್ನು ಸರಕಾರಿ ಸ್ಕೂಲುಗಳಿಗೆ ಕಳುಹಿಸುವುದನ್ನು ನಿಲ್ಲಿಸಿಬಿಟ್ಟರು. ಇದರಿಂದ ಅನೇಕ ಜನ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ಹುಡುಗರುಗಳಿಗೆ ಸ್ಕೂಲೇ ಇಲ್ಲದಂತಾಯಿತು. ಸರ್ಕಾರದವರಿಗೆ ಇದರಿಂದ ಯಾವವಿಧವಾದ ನಷ್ಟವೂ ಆಗಲಿಲ್ಲ ಮತ್ತು ಇದಕ್ಕೆ ಅವರು ಲಕ್ಷ್ಯವನ್ನೂ ಕೊಡಲಿಲ್ಲಾ ಆದರೆ ಆಯಾಸ್ಥಳದ ಜನಗಳು ಸೇರಿ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ "ನ್ಯಾಷನಲ್" ಸ್ಕೂಲುಗಳನ್ನು ಏರ್ಪಡಿಸಿಕೊಂಡರು.

ಸರ್ಕಾರದವರಿಂದ ಈ ನ್ಯಾಷನಲ್ ಸ್ಕೂಲುಗಳಿಗೆ ಯಾವವಿಧವಾದ ಗ್ರಾಂಟೂ ಕೊಡಲ್ಪಡದಿದ್ದರೂ, ಶಾಲೆಯ ಕೆಲಸಗಳು ಸಮರ್ಪಕವಾಗಿ ನಡೆಯುವಂತೆ ಮಹಾಜನಗಳು ಇದಕೋಸ್ಕರವಾಗಿ ಕೊಡುವ ಹಣದಿಂದಲೇ ಕಳೆದ ಒಂದೆರಡು ವರ್ಷಗಳಿಂದಲೂ ನಡೆಸಿಕೊಂಡು ಬಂದಿರುತ್ತಾರೆ. ಸರ್ಕಾರದವರ ಸಹಾಯವನ್ನು ಹೊಂದದೆ ಯಾವುದಾದರೂ ಒಂದು ಸ್ಥಳದಲ್ಲಿ ಜನಗಳೇ ಸ್ಕೂಲನ್ನು ನಡೆಸಿಕೊಂಡುಬಂದಲ್ಲಿ, ಅಂಥಾ ಸ್ಕೂಲುಗಳಿಗೆ ಸರ್ಕಾರದವರು ಗ್ರಾಂಟನ್ನು ಕೊಡುವುದೆಂದೂ ಈಗ ಈ ನ್ಯಾಷನಲ್ ಸ್ಕೂಲುಗಳು ಸ್ಥಾಪಿತವಾಗಿ ಎರಡು ವರ್ಷಗಳಾಗಿರುವುದರಿಂದ ಇದಕ್ಕೂ ಗ್ರಾಂಟನ್ನು ಕೊಡಬೇಕೆಂದು ಕೆಲವು ಜನಗಳು ವೃತ್ತಪತ್ರಿಕೆಗೆ ತಮ್ಮ ಲೇಖನವನ್ನು ಕಳುಹಿಸುತ್ತಿರುವರು. ಒಂದುವೇಳೆ ನ್ಯಾಷನಲ್ ಸ್ಕೂಲುಗಳನ್ನು ಸ್ಥಾಪಿಸಿದ ಮಹನೀಯರುಗಳು ಸರ್ಕಾರದವರಿಂದ ಗ್ರಾಂಟನ್ನು ತೆಗೆದುಕೊಳ್ಳುವುದಾದರೆ ಸರ್ಕಾರದ ನಿಯಮಗಳಿಗನುಸಾರವಾಗಿ ನಡೆಯಬೇಕಾಗುವುದಲ್ಲವೆ? ಸರ್ಕಾರದವರು ಪಂಚಮರನ್ನು ಸೇರಿಸಬೇಕೆಂದು ಹೇಳುವುದಾದರೆ ಇವರುಗಳು ಅದರಂತೆಯೆ ನಡೆಯಬೇಕಾಗುವುದಲ್ಲವೆ? ನ್ಯಾಷನಲ್ ಸ್ಕೂಲುಗಳನ್ನು ಸ್ಥಾಪಿಸಿದ ಉದ್ದಿಶ್ಯವೇನು? ಇವರು ಸರ್ಕಾರದವರನ್ನು ಗ್ರಾಂಟ್ ಕೇಳುವುದಕ್ಕೆ ಆಲೋಚಿಸುತ್ತಿರುವ ದೇನು? ಇದನ್ನೆಲ್ಲಾ ನ್ಯಾಷನಲ್ ಸ್ಕೂಲ್ ಸ್ಥಾಪಕರು ಯೋಚಿಸುವುದುತ್ತಮವಲ್ಲವೆ?,

ವಿಲ್ಲರ್‌ರಿಪೋರ್ಟು ಒಂದಮೇಲೆ ಬ್ರಾಹ್ಮಣ ವಿದ್ಯಾಸಹಾಯ ಸಂಘವೊಂದು ಏರ್ಪಡಿಸಲ್ಪಟ್ಟಿತು ಈ ಸಂಘಕ್ಕೆ ಸಂಸ್ಥಾನದಲ್ಲಿರುವ ಬ್ರಾಹ್ಮಣರುಗಳೂ. ಬ್ರಾಹ್ಮಣ ವಿದ್ಯಾಸಹಾಯಸಂಘದಲ್ಲಿ ಆಸಕ್ತಿಯುಳ್ಳ ಬ್ರಾಹ್ಮಣೇತರರುಗಳೂ ತಮ್ಮ ಶಕ್ತ್ಯಾನುಸಾರ ಹಣವನ್ನು ಕೊಡುತ್ತಾ ಇದಾರೆ. ಈ ಹಣವೆಲ್ಲಾ ಒಟ್ಟಾಗಿ ಸೇರಿದನಂತರ ಹೈಸ್ಕೂಲುಗಳಲ್ಲಿಯೂ, ಕಾಲೇಜುಗಳಲ್ಲಿಯೂ, ಮತ್ತು ಇಂಡಸ್ಟ್ರಿಯಲ್ ಸ್ಕೂಲುಗಳಲ್ಲಿಯೂ ಒದಗತಕ್ಕ ಸಹಾಯವನ್ನು ಹೊಂದಲು ಯೋಗ್ಯರಾದ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡಬೇಕೆಂಬದಾಗಿ ಯೋಚಿಸಿರುತ್ತಾರೆ.

ಈಗ ನಮ್ಮ ಸಂಸ್ಥಾನದಲ್ಲಿರುವ ಎ. ವಿ. ಸ್ಕೂಲು ಮತ್ತು ಹೈಸ್ಕೂಲು ವಿದ್ಯಾರ್ಥಿಗಳಲ್ಲನೆ ಕರಿಗೆ ಕಾಲೇಜ್ ವಿದ್ಯಾಭ್ಯಾಸ ಮಾಡುವುದಕ್ಕೆ ಅನುಕೂಲಗಳಿರುವುದಿಲ್ಲ. ನಮ್ಮ ಬ್ರಾಹ್ಮಣರುಗಳಲ್ಲಿ ಧನಿಕರಿಗಿಂತ ಬಡವರೆ ಹೆಚ್ಚಾಗಿರುವುಕಾರಣ ಹೈಸ್ಕೂಲು ವಿದ್ಯಾಭ್ಯಾಸವು ಮುಗಿದ ಮೇಲೆ ಎಷ್ಟೋಜನ ವಿದ್ಯಾರ್ಥಿಗಳು ಮನೆಯ ಸಂಸಾರವನ್ನು ನಡೆಸಬೇಕಾಗಿರುವುದು. ಇಂಥಾ ವಿದ್ಯಾರ್ಥಿಗಳಿಗೆ ಬ್ರಾಹ್ಮಣ ವಿದ್ಯಾಸಹಾಯಸಂಘದಿಂದ ವೇತನವನ್ನು ಕೊಡುವುದಾದರೂ ಅವರಿಗೇನೂ ಪ್ರಯೋಜನವಾಗಲಾರದು.

ವಿಲ್ಲರ್‌ಕಮಿಟಿ ರಿಪೋರ್ಟಿನ ಮೇರೆಗೆ ಇನ್ನು ಏಳು ವರ್ಷಗಳವರಿವಿಗೆ ಬ್ರಾಹ್ಮಣರಿಗೆ ನೌಕರಿ ಸಿಕ್ಕುವುದು ಕಷ್ಟ. ಆದರೆ ಈಗ ಓದುತ್ತಿರುವ ಬ್ರಾಹ್ಮಣ ವಿದ್ಯಾರ್ಥಿಗಳಲ್ಲನೇಕರು ಜೀವನವನ್ನು ಸಂಪಾದಿಸಿಕೊಳ್ಳಲು ದ್ದಿಶ್ಯದಿಂದ ಓದುವಂತಾದಕಾರಣ ಹೈಸ್ಕೂಲು ವಿದ್ಯಾಭ್ಯಾಸವು ಮುಗಿದಮೇಲೆ ಅಂಥಾ ಬಡ ವಿದ್ಯಾರ್ಥಿಗಳಿಗೆ ಸ್ವತಃ ಜೀವನವನ್ನು ಸಂಪಾದಿಸಿಕೊಳ್ಳುವಷ್ಟು ಅನುಕೂಲವಿರುತ್ತದಯೆ?.

ಆದರೆ ಬ್ರಾಹ್ಮಣ ವಿದ್ಯಾಸಹಾಯದ ಮೆಂಬರುಗಳು "ಅಂಥಾ ಬಡವಿದ್ಯಾರ್ಥಿಗಳು ಹೈಸ್ಕೂಲುಗಳಲ್ಲಿ ಓದುವುದಕ್ಕೆ ಬದಲಾಗಿ, ಇಂಡಸ್ಟ್ರಿಯಲ್ ಸ್ಕೂಲುಗಳಲ್ಲಿ ಯಾತಕ್ಕೆ ಓದಕೂಡದು" ಎಂಬುದಾಗಿ ಹೇಳಬಹುದು. ಪ್ರತಿಯೊಬ್ಬ ಹುಡುಗನೂ, ಹೈಸ್ಕೂಲುಗಳಲ್ಲಿ ಓದತಕ್ಕ ಹುಡುಗರಿಗಿರುವಷ್ಟು, ಇಂಗ್ಲಿಷ್ ಮತ್ತು ಕನ್ನಡ ಭಾಷಾಜ್ಞಾನವಿರಬೇಕೆಂದು ಅಪೇಕ್ಷಿಸುವ ಕಾರಣ ಇಂಡಸ್ಟ್ರಿಯಲ್ ಸ್ಕೂಲುಗಳಲ್ಲಿ, ಹೈಸ್ಕೂಲಿನಲ್ಲಿ ಕಲಿಯಬಹುದಾದಷ್ಟು ಇಂಗ್ಲಿಷ್ ಮತ್ತು ಕನ್ನಡ ಪಾಠಗಳನ್ನು ಹೇಳಿಕೊಡುವುದಕ್ಕೆ ಏರ್ಪಾಡುಮಾಡಲ್ಪಟ್ಟಿ

ವಿಷಯಾಭಿಮಾನಿ.

ಸಂಪದಭ್ಯುದಯ ಪತ್ರಿಕಾಕರ್ತರ ವಿಷಯದಲ್ಲಿ ಸ್ವಾರ್ ಪತ್ರಿಕಾಕರ್ತರು ತಿಳಿಸುವುದೇನೆಂದರೆ:— ಸಂಪದಭ್ಯುದಯ ಪತ್ರಿಕಾಕರ್ತರು ದೇಶದಲ್ಲಿ ಶಾಂತಿಯನ್ನು ಉಳಿಯಗೊಡಿಸುವಂತಿಲ್ಲ. ಕಲಹಾಸ್ಪದ ಲೇಖನಗಳನ್ನು ಅವರು ಪ್ರಕಟಿಸದೆ ಬಿಡಲಿಲ್ಲ. ನಾವು ಕಳೆದ ಸಂಚಿಕೆಯಲ್ಲಿ ಮಾಡಿದ್ದ ನಿರೀಕ್ಷಣೆಯು ವ್ಯರ್ಥವಾಯಿತು. ಅವರಿಗೆ ಮೂಡುವ ಹಿತೋಪದೇಶವೆಲ್ಲಾ ಗೋರ್ಕಲ್ಲಿಗೆ ತೈಲಾಭಿಷೇಕ ಮಾಡಿದಷ್ಟೇಫಲವನ್ನು ಕೊಡುವುದು. ಹಿಂದುಳಿದ ಪ್ರಜೆಗಳ ಮೇಲೆ ಅವರು ವಿಷಕಾರುವುದನ್ನು ಬಿಡುವುದಿಲ್ಲ. ದ್ವೇಷೋತ್ಪಾದಕ ಲೇಖನಗಳಿಗೆ ಪ್ರಭುತ್ವದವರೂ ತಡೆಕಟ್ಟುವಂತೆ ತೋರಲಿಲ್ಲ. ಏಕಪಕ್ಷೀಯವಾದ ದುರ್ವಾದಗಳ ಅಸತ್ಯವನ್ನೂ ಅನ್ಯಾಯವನ್ನೂ ಖಂಡಿಸದಿರುವುದು ನಮಗೆ ಸಾಧ್ಯವಲ್ಲ. ಪ್ರಭುತ್ವದವರ ಮತ್ತು ಸಾತ್ವಿಕ ಪ್ರಜೆಗಳ ಮೇಲೆ ನಾನಾ ದೋಷಾರೋಪಣೆಮಾಡಿ ಬರೆಯಲ್ಪಡುತ್ತಿರುವ ಕ್ಷುಲ್ಲಕ ಲೇಖನಗಳನ್ನು ರಾಜಭಕ್ತರೂ ದೇಶಾಭಿಮಾನಿ ಪ್ರಜೆಗಳೂ ಸೈರಿಸಿಕೊಂಡಿರಲಾರರು. ದುರ್ಲೇಖನಧ್ವಂಸನ ಕ್ರಿಯೆಯು ಪ್ರಭುತ್ವದವರಿಂದ ಆಗದಿದ್ದಬಳಿಕ ಪ್ರತಿಲೇಖನಕ್ರಿಯೆಗಳೇ ಸಾಗಬೇಕಾಗಿ ಬಂದುದನ್ನು ಕಂಡು ವಿಷಾದಿಸಬೇಕಾಯಿತು.

ಕಲಕತ್ತೆಯಲ್ಲಿ ಜವಳಿ ಅಂಗಡಿಯ ಪಿಕೆಟಿಂಗ್ ಮಾಡುವ ೪೦ ಬೆಲಾಪತ ಹುಡುಗರಿಗೆ ರಸ್ತೇಗೆ ಅಡ್ಡಿಮಾಡಿದರೆಂಬ ಆರೋಪದಿಂದ ಹಿಡಿದಿರುವರು.

ಕಾರಂಜಾ ಮುನಸಿಪಾಲಟಿಯವರು ತಮ್ಮ ಹದ್ದಿನಲ್ಲಿಯ ಸೇರಿದ ಅಂಗಡಿಗಳನ್ನು ತೆಗೆದುಹಾಕುವ ತೀರ್ಮಾನವು ಮಾಡಿರುವರು.

ಪ್ಯಾರಿಸ್ ಪಟ್ಟಣದ ಬೀದಿಗಳಲ್ಲಿ ದಿನಒಂದಕ್ಕೆ ಸರಾಸರಿ ೧೬೫ ಅವಾಯಗಳುಂಟಾಗುತ್ತಿವೆ.

ಜರ್ಮನಿಯಿಂದ ಸಿಗತಕ್ಕ ಹಣದಲ್ಲಿ ಹಿಂದೂಸ್ಥಾನದ ಪಾಲಿಗೆ ಸುಮಾರು ೨೫ ಕೋಟಿ ರೂಪಾಯಿಗಳು ಬರುತ್ತವೆಂದು ಮಿ|| ಮಾಂಟೇಗ್ ಇವರು ಪಾರ್ಲಿಮೆಂಟಿನಲ್ಲಿ ಹೇಳಿದರು.

Printed and Published by Mr. M. S. Krishna Rao, at the *Satyavadi* Press Ylewal Road, Sivarampet, Mysore.